ಆ) ವಾಣಿಜ್ಯ ಆಧಾರದ ಹಾಗೂ ದೀರ್ಘ ಕಾಲದ ರಿಯಾಯಿತಿ ಆಧಾರದ (R.O.M.T) ಮೇರೆಗೆ

ಇ) ಉಪಹಾರಗೃಹ ಮಾತ್ರ ನಷ್ಟದಲ್ಲಿದ್ದು ಇದನ್ನು ನವೀಕರಿಸಿ ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಮಯೂರ ಹೈ ವೇ ಉಪಹಾರಗೃಹ, ಮದ್ದೂರು.
ಮಯೂರ ನಿಸರ್ಗ ಉಪಹಾರಗೃಹ, ಮುತ್ಯಾಲಮಡುವು.
ಮಯೂರ ವನಶ್ರೀ ಉಪಹಾರಗೃಹ, ಬನ್ನೇರುಘಟ್ಟ

ರಾಜ್ಯದಲ್ಲಿ ಕನ್ನಡ ಚಿತ್ರಗಳಿಗೆ ರಿಯಾಯತಿ

2434 (3236) : ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ವಾರ್ತಾ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಕನ್ನಡ ಚಿತ್ರಗಳಿಗೆ ನೀಡುತ್ತಿರುವ ಸಬ್ಸಿಡಿಯ ಮೊತ್ತವೆಷ್ಟು?

ಆ) ಯಾವ ಯಾವ ಉತ್ತಮ ಚಿತ್ರಗಳಿಗೆ 2000–01, 2002 ಹಾಗೂ 2003ನೇ ಸಾಲಿನಲ್ಲಿ ಸಬ್ಸಿಡಿ ಹಣವನ್ನು ವಿತರಣೆ ಮಾಡಲಾಗಿದೆ? (ವಿವರ ಒದಗಿಸುವುದು)

ಇ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಅಲ್ಲಂ ವೀರಭದ್ರಪ್ಪ (ವಾರ್ತಾ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು):

ಅ) ಒಂದು ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ ಚಲನಚಿತ್ರಗಳಲ್ಲಿ ಗುಣಾತ್ಮಕ ಆಯ್ಕೆ ಸಲಹಾ ಸಮಿತಿಯು ವೀಕ್ಷಿಸಿ ಆಯ್ಕೆ ಮಾಡುವ ಗರಿಷ್ಠ 20 ಚಲನಚಿತ್ರಗಳಿಗೆ ಮಾತ್ರ ತಲಾ ರೂ. 10.00 ಲಕ್ಷಗಳ ಸಹಾಯಧನವನ್ನು ನೀಡಲಾಗುತ್ತಿದೆ.

ಆ) 2000–01ನೇ ಸಾಲಿನಲ್ಲಿ ಸಹಾಯಧನಕ್ಕಾಗಿ ಈ ಕೆಳಗೆ ಕಾಣಿಸಲಾಗಿರುವ ಚಿತ್ರಗಳು ಆಯ್ಕೆಯಾಗಿವೆ : 1. ಮುಸ್ಸಂಜೆ 2. ಎ.ಕೆ. 47 3. ಚಾಮುಂಡಿ 4. ಹಬ್ಬ 5. ವಂದೇ ಮಾತರಂ 6. ಚಂದನ ಚಿಗುರು 7. ಸುಲ್ತಾನ್ 8. ಗಟ್ಟಿಮೇಳ 9. ಹಗಲು ವೇಷ 10. ಉತ್ತರ ದೃವದಿಂ ದಕ್ಷಿಣ ದೃವಕೂ 11. ಭಾರತನಾರಿ 12. ಹ್ಯಾಟ್ಸ್ ಆಫ್ ಇಂಡಿಯಾ 13. ಭೂಮಿ 14. ಶ್ರೀರಸ್ತು ಶುಭಮಸ್ತು 15. ಮಹಾಲಕ್ಷ್ಮಿ 16. ಅಂಜಿಲಿ ಗೀತಾಂಜಲಿ 17. ಕಡ್ಲಿಮಟ್ಟಿ ಸ್ಟೇಷನ್ ಮಾಸ್ಟರ್ 18. ದುರ್ಗದ ಹುಲಿ 19. ಸ್ವರ್ಶ 20. ಅಂತಃಪುರ (ತುಳು)

ಈ ಚಿತ್ರಗಳಿಗೆ 2003–04ನೇ ಸಾಲಿಗೆ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ ತಲಾ ರೂ. 5–00 ಲಕ್ಷಗಳ ಭಾಗಶಃ ಸಹಾಯಧನವನ್ನು ಪಾವತಿಸಲಾಗುತ್ತಿದೆ.

2001–02ನೇ ಸಾಲಿನಲ್ಲಿ ಬಿಡುಗಡೆಯಾದ ಚಿತ್ರಗಳನ್ನು ಸಹಾಯಧನಕ್ಕಾಗಿ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಸಮಿತಿಯು ಪ್ರಾರಂಭಿಸಿದ್ದು ಪ್ರಕ್ರಿಯೆ ಪ್ರಗತಿಯಲ್ಲಿದೆ.

2002–03ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಚಿತ್ರಗಳನ್ನು ಸಹಾಯಧನಕ್ಕಾಗಿ ಆಯ್ಕೆ ಮಾಡುವ ಪ್ರಕ್ರಿಯೆ ಪ್ರಾರಂಭವಾಗಬೇಕಾಗಿದೆ.

ಇ) ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಪ್ರತಿ ವರ್ಷ ಎರಡು ಕೋಟಿ ರೂಪಾಯಿಗಳು ವೆಚ್ಚವಾಗಲಿದೆ.